ನಸ್ರುದ್ದೀನ್ ಅಂಥ ಬೀಗದ ಕೈಯನ್ನು ಕಳೆದುಕೊಂಡಿದ್ದಾನೆ; ಅದನ್ನು ಹುಡುಕುತ್ತಿದ್ದಾನೆ. ಆದರೆ ಅವನು ಅದನ್ನು ಕಳೆದುಕೊಂಡಿರುವುದು ಎಲ್ಲೋ, ಹುಡುಕುತ್ತಿರುವುದು ಮತ್ತೆಲ್ಲೋ! ಇಡೀ ಪ್ರಸಂಗದ ಸ್ವಾರಸ್ಯ ಇರುವುದೇ ಈ 'ವಿಚಿತ್ರ' ನಡೆವಳಿಕೆಯಲ್ಲಿ.

ನಮ್ಮ ಜೀವನವನ್ನು ನಾವು ಅವಲೋಕನ ಮಾಡಿಕೊಳ್ಳೋಣ. ನಾವು ಏನೇನೋ ಕಳೆದುಕೊಳ್ಳುತ್ತಲೇ ಇರುತ್ತೇವೆ. ಆದರೆ ಹೆಚ್ಚಿನ ಸಂದರ್ಭದಲ್ಲಿ ನಮ್ಮ ಪಾಡು ಹೇಗಿರುತ್ತದೆ ಎಂದರೆ, ಎಲ್ಲೋ ಕಳೆದುಕೊಂಡು ಮತ್ತೆಲ್ಲೋ ಅದನ್ನು ಹುಡುಕುತ್ತಿರುತ್ತೇವೆ. 'ಕಳೆದುಕೊಳ್ಳುವುದು', 'ಹುಡುಕುವುದು' – ಎಂದರೆ ಕೂಡಲೇ ನಮ್ಮ ಗಮನ ಯಾವುದಾದರೊಂದು ವಸ್ತುವಿನ ಕಡೆಗೇ ಚಲಿಸುವುದು. ಆದರೆ ಈ ಕಥೆಯಲ್ಲಿರುವ 'ಬೀಗದ ಕೈ' ಅದು ಬೀಗದ ಕೈ ಅಷ್ಟೇ ಅಲ್ಲ. ಬೀಗದ ಕೈ ಎನ್ನುವುದು ಇಲ್ಲಿ ಒಂದು ಸಂಕೇತವೇ ಹೊರತು ಅದೇ ಇಲ್ಲಿನ ಕಾರಣವಸ್ತು ಅಲ್ಲ. ಇಲ್ಲಿ ಕಳೆದುಹೋಗಿರುವುದು ಮನೆಯ ಬೀಗದ ಕೈ ಅಲ್ಲ. ನಾವು ಹಲವಾರು ಸಂಗತಿಗಳನ್ನು ಬಂಧಿಸಿ, ನಮ್ಮ ಕೈವಶ ಮಾಡಿಕೊಂಡಿದ್ದೇವೆ; ಆದರೆ ಪುನಃ ಅದನ್ನು ದಕ್ಕಿಸಿಕೊಳ್ಳುವಂಥ ಮಾರ್ಗವನ್ನೇ ಕಳೆದುಕೊಂಡಿದ್ದೇವೆ. ಇದು ಈ ಕಥೆಯ ಒಂದು ಧ್ವನಿ. ಇಂಥ ಹಲವು ಧ್ವನಿಗಳನ್ನು ಇಲ್ಲಿ ನೋಡಬಹುದು; ಕೇಳಬಹುದು.

ಮುಖ್ಯವಾಗಿ ನಾವು ಜೀವನದಲ್ಲಿ ಕಳೆದುಕೊಂಡಿರುವುದು ಸಂತಸವನ್ನು, ನೆಮ್ಮದಿಯನ್ನು, ಪ್ರಶಾಂತತೆಯನ್ನು. ಆದರೆ ಅದನ್ನು ಎಲ್ಲಿಯೋ ಕಳೆದುಕೊಂಡು ಮತ್ತೆಲ್ಲಿಯೋ ಹುಡುಕುತ್ತಿದ್ದೇವೆ. ಜೀವನದ ಸಂತಸ – ನೆಮ್ಮದಿಗಳು ಇರುವುದು ಜೀವಿಸುವುದರಲ್ಲಿಯೇ. ಆದರೆ ನಾವು ಅದನ್ನೇ ಮರೆತು ಜೀವನವನ್ನು ನಮ್ಮ ಕ್ಷಣಕ್ಷಣದ ನಡೆ – ನುಡಿಗಳಲ್ಲಿ ಬದುಕಿಸದೆ ಕೊಲ್ಲುತ್ತಿರುತ್ತೇವೆ. ಈ ಕ್ಷಣವನ್ನು ನಾಳೆಗಾಗಿ ಬದುಕುವುದು ಎಂದರೆ ಅದನ್ನು ಕೊಂದಂತೆಯೇ ಹೌದು. ಒಂದೊಂದು ಕ್ಷಣವನ್ನೂ ನಾವು ಪೂರ್ಣವಾಗಿ ಬದುಕಿದರೆ ಅದೇ ನಿಜವಾದ ಜೀವನ. ಆದರೆ ನಾವು ಜೀವನವನ್ನೇ ಪ್ರತಿ ಕ್ಷಣವೂ ಕಳೆದುಕೊಳ್ಳುತ್ತ ಅದನ್ನು ಮತ್ತೆ ಎಲ್ಲೋ ಹೊರಗೆ ಹುಡುಕುತ್ತಿರುತ್ತೇವೆ. ಹೀಗೆ ಎಲ್ಲೆಲ್ಲೋ ಜೀವನವನ್ನು ಹುಡುಕುತ್ತ ಒಂದು ದಿನ, ನಮಗೆ ಗೊತ್ತಿಲ್ಲದಂತೆಯೇ ಅದು ಮುಗಿದೇಹೋಗಿರುತ್ತದೆ. ಹೀಗಾಗಿ ನಾವು ಮೊದಲಿಗೆ ಏನನ್ನು ಕಳೆದುಕೊಂಡಿದ್ದೇವೆ ಎಂಬುದನ್ನು ಕಂಡುಕೊಳ್ಳಬೇಕು. 'ಶಿವಾಪರಾಧ ಕ್ಷಮಾಪಣಸ್ತೋತ್ರ'ದಲ್ಲಿ ಜೀವನದ ನಶ್ವರತೆಯನ್ನು ವರ್ಣಿಸುವ ಪದ್ಯವೊಂದು ಸೊಗಸಾಗಿದೆ: 'ನಾವು ನೋಡುನೋಡುತ್ತಿದ್ದಂತೆಯೇ ನಮ್ಮ ದಿನಗಳೂ ಆಯುಸ್ಸು ಕ್ಷಯಿಸುತ್ತಲೇ ಇರುತ್ತವೆ; ಯೌವನವೂ ಕಳೆದುಹೋಗುತ್ತಿರುತ್ತದೆ; ಮಾತ್ರವಲ್ಲ, ಕಳೆದುಹೋದ ದಿನಗಳೂ ಎಂದಿಗೂ ಹಿಂದಿರುಗಿ ಬರಲಾರವು. ಸಂಪತ್ತು ಎನ್ನುವುದು ನೀರಿನ ಅಲೆಯಂತೆ ಚಂಚಲ. ನಮ್ಮ ಇಡಿಯ ಜೀವನವೇ ಮಿಂಚಿನಂತೆ ಕ್ಷಣಿಕವಾದುದು. ಎಲ್ಲವನ್ನೂ ಕಾಲವು ಕಬಳಿಸುತ್ತಲೇ ಇರುತ್ತದೆ. ಆದುದರಿಂದ ಹೇ! ಭಗವಂತ!! ನನ್ನನ್ನು ಈಗಲೇ ಕಾಪಾಡು, ಕಾಪಾಡು!!!'

ಕಾಲವನ್ನು ಕುರಿತು ಅಲ್ಲಿ ಹೇಳಿರುವ ಮಾತು ಮಾರ್ಮಿಕವಾಗಿದೆ:

'ಕಾಲೋ ಜಗದ್ಭಕ್ಷಕಃ' – 'ಕಾಲ ಜಗತ್ತಿನ ಎಲ್ಲವನ್ನೂ ತಿಂದು ತೇಗುವವ.'

ಜೀವನದ ಒಂದೊಂದು ಕ್ಷಣವೂ ನಮ್ಮ ಆಯುಸ್ಸಿನ ಪ್ರಮಾಣವನ್ನು ನಿರಂತರವಾಗಿ ಕಡಿಮೆ ಮಾಡುತ್ತಲೇ ಇರುತ್ತದೆ. ಹೀಗೆ ನಶ್ವರವಾಗಿರುವ ನಮ್ಮ ಬದುಕನ್ನು ಹೇಗೆ ಸಾರ್ಥಕಗೊಳಿಸಿಕೊಳ್ಳುವುದು? ಒಂದೊಂದು ಕ್ಷಣವನ್ನೂ ಪೂರ್ಣವಾಗಿಯೂ ಸುಂದರವಾಗಿಯೂ ಬದುಕಬೇಕಷ್ಟೆ. ನಮ್ಮ ಮುಂದಿರುವ ಜೀವನದ ಸೌಂದರ್ಯವನ್ನು